ಅ) ಇಲ್ಲ

ಆ) ರಜಾದಿನಗಳಂದು ಹಾಗೂ ಇತರೆ ಖಾಸಗಿ ಉದ್ದೇಶಗಳಿಗಾಗಿ ಸರ್ಕಾರಿ ವಾಹನಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:–

1. ಸಂತೋಷ ಕೂಟಗಳು, ವಿಹಾರ ಯಾತ್ರೆಗಳು ಹಾಗೂ ಇಂತಹ ಇತರೆ ಪ್ರವಾಸಗಳಿಗಾಗಿ ಸರ್ಕಾರಿ ವಾಹನಗಳನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ.
2. ಅಧಿಕಾರಿಗಳು ತಮ್ಮ ಕೇಂದ್ರಸ್ಥಾನದ ಪರಿಮಿತಿಯ ಹೊರಗಡೆ ಖಾಸಗಿ ಉದ್ದೇಶಗಳಿಗಾಗಿ ಸರ್ಕಾರಿ ವಾಹನಗಳನ್ನು ತೆಗೆದುಕೊಂಡು ಹೋಗುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
3. ಅತೀ ತುರ್ತು ಸಂದರ್ಭಗಳನ್ನು ಹೊರತುಪಡಿಸಿ ಸಚಿವರುಗಳ ಮತ್ತು ಸರ್ಕಾರದ ಅಧಿಕಾರಿಗಳು ಭಾನುವಾರಗಳಂದು ಸರ್ಕಾರಿ ಮೋಟಾರು ಕಾರುಗಳನ್ನು ಉಪಯೋಗಿಸಬಾರದೆಂದು ಸೂಚಿಸಲಾಗಿದೆ.

ಇ) ಈಗಾಗಲೇ ತೆಗೆದುಕೊಂಡಿರುವ ಕ್ರಮಗಳು ಸಾಕಷ್ಟು ಇದೆಯೆಂದು ಕಂಡುಬಂದಿರುವುದರಿಂದ, ಈ ಬಗ್ಗೆ ಹೊಸ ನೀತಿ ಸಂಹಿತೆಯನ್ನು ಹೊರಡಿಸುವ ಅವಶ್ಯಕತೆಯಿಲ್ಲವೆಂದು ಸರ್ಕಾರವು ಪರಿಗಣಿಸಿದೆ.

ಸೀಮೆಎಣ್ಣೆ ಮತ್ತು ಡೀಸೆಲ್ ಬೇಡಿಕೆಯ ಪ್ರಮಾಣ

251 (320) ಶ್ರೀ ಬಿ. ರಾಜುಗೌಡ (ಹನೂರು):-

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ತಿಂಗಳೊಂದಕ್ಕೆ ಸೀಮೆಎಣ್ಣೆ ಮತ್ತು ಡೀಸೆಲ್ ಬೇಡಿಕೆ ಎಷ್ಟು;

ಆ) ಇದನ್ನು ಯಾವ ಯಾವ ಸಂಸ್ಥೆಗಳು ಎಷ್ಟೆಷ್ಟು ಪೂರೈಸುತ್ತಿದೆ;

ಇ) ಇದರಿಂದ ರಾಜ್ಯ ಸರ್ಕಾರಕ್ಕೆ ಆಗುವ ಲಾಭ ಹಾಗೂ ನಷ್ಟ ಎಷ್ಟು ?

ಶ್ರೀಮತಿ ಮನೋರಮ ಮಧ್ವರಾಜ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಸೀಮೆಎಣ್ಣೆ – 67,000 ಕೆ.ಎಲ್.
ಡೀಸೆಲ್ – 1,03,903 ಮೆ.ಟನ್

ಆ) ಈ ಕೆಳಗಿನಂತೆ:–

	ಸೀಮೆಎಣ್ಣೆ	ಡೀಸೆಲ್
ಇಂಡಿಯನ್ ಆಯಿಲ್ ಕಾರ್ಪೊರೇಷನ್	30312	55423
ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್	10218	20952
ಭಾರತ ಪೆಟ್ರೋಲಿಯಂ ಕಾರ್ಪೊರೇಷನ್	6012	24805
ಇಂಡೋ ಬರ್ಮಾ ಪೆಟ್ರೋಲಿಯಂ ಕಂ.	971	2723
ಒಟ್ಟು	47513	103903

ಇ) ರಾಜ್ಯ ಸರ್ಕಾರಕ್ಕೆ ಇದರಿಂದ ಆರ್ಥಿಕವಾಗಿ ಯಾವುದೇ ಲಾಭ ಅಥವಾ ನಷ್ಟ ಆಗುತ್ತಿರುವುದಿಲ್ಲ.